

## ಮದುವೆಗೂ ಮುನ್ನ ಸಂಸಾರ

ಅಂತೂ ಇಂತೂ ಹಸೆಮಣೆ ಏರಲು ಮುಹೂರ್ತ ನಿಗದಿಪಡಿಸಿ ಊಹಾಪೋಹಗಳಿಗೆಲ್ಲಾ ಬ್ರೇಕ್ ಹಾಕಿದ್ದ ರಾಣಿ ಮುಖರ್ಜಿ ಮತ್ತು ಆದಿತ್ಯ ಚೋಪ್ರಾ ಜೋಡಿ ಮದುವೆಗೂ ಮುನ್ನವೇ ಸಂಸಾರ ಹೂಡಿದೆಯಂತೆ. ರಾಣಿ – ಆದಿ ಮದುವೆಗೆ ಇನ್ನು ಕೆಲವೇ ದಿನ ಬಾಕಿ ಇದೆ. ಫೆಬ್ರುವರಿ ಹತ್ತಕ್ಕೆ ಇಬ್ಬರೂ ಅಧಿಕೃತವಾಗಿ ಸತಿಪತಿಗಳಾಗುತ್ತಿದ್ದಾರೆ. ಆದರೆ ಅಲ್ಲಿವರೆಗೂ ಕಾಯಲು ಈ ಜೋಡಿಗೆ ತಾಳ್ಮೆಯಿಲ್ಲವೆನಿಸುತ್ತದೆ.

ಆದಿತ್ಯಗೆ ತನ್ನ ಪ್ರೇಯಸಿಯಿಂದ ಇನ್ನು ದೂರವಿರಲು ಸಾಧ್ಯವಿಲ್ಲವಂತೆ. ಹೀಗಾಗಿಯೇ ತಮ್ಮ ವಾಸಸ್ಥಾನವನ್ನು ರಾಣಿಯ ಜುಹು ಬಂಗಲೆಗೆ ಸ್ಥಳಾಂತರಿಸಿದ್ದಾರಂತೆ. ಅಂದ ಹಾಗೆ, ಫೆ. 10ರಂದು ಹಸೆಮಣೆ ಏರಲು ಈ ಪ್ರೇಮಿಗಳು ಆಯ್ದುಕೊಂಡಿರುವುದು ಜೋಧಪುರದ ಉಮ್ಮೈದ್ ಭವನ್ ಪ್ಯಾಲೇಸ್ ಅನ್ನು. ‘ಲಿವ್ ಇನ್ ಟುಗೆದರ್’ ಎಂದು ಬಾಲಿವುಡ್‌ನ ಜೋಡಿಗಳೆಲ್ಲಾ ಒಂದೆರಡು ತಿಂಗಳು ಒಟ್ಟಿಗೆ ವಾಸ್ತವ್ಯ ಹೂಡಿ ಆಮೇಲೆ ಅಲಿಖಿತ ವಿಚ್ಛೇದನ ಪಡೆಯುವುದು ಮಾಮೂಲಿ. ಆದರೆ ಆದಿತ್ಯ ಮತ್ತು ರಾಣಿ ಹೊಸ ಸಂಪ್ರದಾಯ ಶುರು ಮಾಡಿದ್ದಾರೆ. ಇದುವರೆಗೂ ದೂರವಿದ್ದು ಮದುವೆ ನಿಶ್ಚಯ ಆದ ಬಳಿಕ ಒಂದೇ ಸೂರಿನಡಿ ವಾಸಿಸುತ್ತಿರುವ ಈ ಜೋಡಿ ಮದುವೆ ಬಳಿಕ ಹೇಗೆ ಬದುಕುತ್ತದೆ ಎನ್ನುವುದು ಸದ್ಯದ ಕುತೂಹಲ.



## ಮೃದು ಹೃದಯಿ ಕಂಗನಾ

ಬಾಲಿವುಡ್‌ನ ಹಾಟ್ ನಟಿ ಕಂಗನಾ ರನೌತ್ ಮೊನ್ನೆ ಮೊನ್ನೆ ಆಮ್‌ಸ್ಟರ್‌ಡಮ್‌ನ ‘ಕೆಂಪು ದೀಪದ ಪ್ರದೇಶ’ದಲ್ಲಿ ಕಾಣಿಸಿಕೊಂಡಿದ್ದಾರೆ. ಗಾಬರಿ ಪಡಬೇಕಿಲ್ಲ. ಅವರು ಆಮ್‌ಸ್ಟರ್‌ಡಮ್‌ನ ರೆಡ್‌ಲೈಟ್ ಪ್ರದೇಶದಲ್ಲಿ ಸುತ್ತಾಡಿದ್ದು ಅಧ್ಯಯನಕ್ಕಾಗಿ. ವಿಕಾಸ್ ಬೆಹ್ಲ್ ನಿರ್ದೇಶನದ ‘ಕ್ವೀನ್’ ಚಿತ್ರಕ್ಕಾಗಿ ಆಮ್‌ಸ್ಟರ್‌ಡಮ್‌ನಲ್ಲಿರುವ ಕಂಗನಾ, ಬಿಡುವಿನ ವೇಳೆ ಅಲ್ಲಿನ ರೆಡ್‌ಲೈಟ್ ಪ್ರದೇಶದಲ್ಲಿ ಸುತ್ತಾಡಿ ವೇಶ್ಯೆಯರೊಂದಿಗೆ ದೀರ್ಘಕಾಲ ಹರಟಿದರಂತೆ. ಜೊತೆಗೆ ಹತ್ತಾರು ಸ್ನೇಹಿತೆಯರನ್ನೂ ಅವರು ಸಂಪಾದಿಸಿದ್ದಾರಂತೆ.

ಇದನ್ನೆಲ್ಲಾ ಅವರು ಮಾಡಿದ್ದು ತಮ್ಮ ಪಾತ್ರಕ್ಕಾಗಿ. ಜೊತೆಗೆ ಸಾಮಾಜಿಕ ಕಳಕಳಿಯೂ ಕಂಗನಾರಲ್ಲಿ ಇದೆ ಎನ್ನುತ್ತಾರೆ ಅವರನ್ನು ಬಲ್ಲವರು. ವೇಶ್ಯೆಯರ ಬಗ್ಗೆ ತೀವ್ರ ಅನುಕಂಪ, ಕಾಳಜಿ ಹೊಂದಿರುವ ಕಂಗನಾ, ಅವರೊಂದಿಗೆ ಚರ್ಚಿಸಿ ಅವರ ಸಮಸ್ಯೆಗಳನ್ನು ಅರಿತುಕೊಳ್ಳುತ್ತಾರಂತೆ. ಅವರ ಸುಖ ದುಃಖಗಳಲ್ಲಿ ಭಾಗಿಯಾಗುತ್ತಾರಂತೆ. ವೇಶ್ಯೆಯರ ಬದುಕಿನ ಶೈಲಿಗಳನ್ನು ಸೂಕ್ಷ್ಮವಾಗಿ ಗ್ರಹಿಸಿ ಅದನ್ನು ತಮ್ಮ ಪಾತ್ರಗಳಿಗೆ ಹೊಂದಿಸಿಕೊಳ್ಳುವುದು ಕಂಗನಾ ಅನುಸರಿಸುತ್ತಿರುವ ಕ್ರಮ.

‘ರಜ್ಜೋ’ ಚಿತ್ರೀಕರಣದ ಸಮಯದಲ್ಲಿಯೂ ಕಂಗನಾ, ಮುಂಬೈನಲ್ಲಿ ವೇಶ್ಯೆಯರೊಂದಿಗೆ ಬೆರೆತು ಹರಟಿದ್ದರಂತೆ. ತಮ್ಮ ಪಾತ್ರಕ್ಕಾಗಿ ಒಮ್ಮೆ ಅಲ್ಲಿಗೆ ಹೋದ ಕಂಗನಾ, ಈಗಲೂ ಆಗಾಗ್ಗೆ ಅಲ್ಲಿಗೆ ಭೇಟಿ ನೀಡುತ್ತಿದ್ದಾರೆ. ‘ಅಮ್‌ಸ್ಟರ್‌ಡಮ್‌ನ ಈ ಅನುಭವ ವಿಶಿಷ್ಟ’ ಎಂದಿದ್ದಾರೆ ಕಂಗನಾ. ಚಿತ್ರೀಕರಣ, ಪಾರ್ಟಿ, ಸುತ್ತಾಟಗಳಲ್ಲೇ ಮುಳುಗುವ ಖ್ಯಾತನಾಮ ನಟೀಮಣಿಯರ ನಡುವೆ ಕಂಗನಾ ನಿಜಕ್ಕೂ ಭಿನ್ನವೇ.

■ ಅಮಿ